

# ಮುಂಡರಗಿ ಈಳಿಗೆಗೆ ಭಾರಿ ಬೇಡಿಕೆ!

ಚಿತ್ರ–ಬರಹ:
**ಚೇತನ್ ಸೊಲಗಿ**

ಪ್ಲಾಸ್ಟಿಕ್, ಫೈಬರ್, ಸ್ಟೀಲ್, ಅಲ್ಯುಮಿನಿಯಮ್‌ನಿಂದ ತಯಾರಾಗುವ ಆಕರ್ಷಕ ಈಳಿಗೆಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ. ಆದರೆ ಈ ಸ್ಪರ್ಧೆಯ ಮಧ್ಯೆಯೂ ಮುಂಡರಗಿಯ ಕಮ್ಮಾರರು ಸ್ವತಃ ತಯಾರಿಸುತ್ತಿರುವ ಉಕ್ಕಿನ ಈಳಿಗೆಗಳಿಗೆ ನಾಡಿನಾದ್ಯಂತ ಭಾರೀ ಬೇಡಿಕೆ ಇದೆ.

ಗದಗ ಜಿಲ್ಲೆ ಮುಂಡರಗಿಯ ಈಳಿಗೆಗಳು ಬಹಳ ಹಿಂದಿನಿಂದಲೂ ಜನಪ್ರಿಯ. ಬೇರೆ ಈಳಿಗೆಗಳು ಉಪಯೋಗಿಸಿದ ಹಾಗೆಯೇ ಸವಕಳಿ ಬರುತ್ತವೆ. ಆದರೆ ಮುಂಡರಗಿಯದ್ದು ಹಾಗಲ್ಲ, ಈ ಈಳಿಗಗೆಗಳು ಬಳಸಿದಷ್ಟೂ ಹೆಚ್ಚು ಹರಿತವಾಗುವುದರ ಜೊತೆಗೆ ಬಾಳಿಕೆಯೂ ದೀರ್ಘ. ಬಳಕೆ ಮಾಡಿದಂತೆ ತುಕ್ಕು ಹಿಡಿಯುವುದಿಲ್ಲ. ಇಲ್ಲಿ ಐದು ವಿಧಗಳಲ್ಲಿ ಈಳಿಗೆಗಳು ತಯಾರಾಗುತ್ತದೆ. ಒಂದು ಕುಟುಂಬದವರು ದಿನಕ್ಕೆ ಸುಮಾರು 30 ಈಳಿಗೆಗಳನ್ನು ತಯಾರಿ–ಸುತ್ತಾರೆ. ಒಟ್ಟು ಐದು ಕುಟುಂಬಗಳಿಂದ ತಿಂಗಳಿಗೆ ಐದರಿಂದ ಆರು ಸಾವಿರ ಈಳಿಗೆಗಳು ತಯಾರಾಗುತ್ತವೆ.

‘ನಾವು ತಯಾರಿಸಿದ ಈಳಿಗೆಗಳು ಒಮ್ಮೆಯೂ ಮಾರಾಟವಾಗದೆ ಉಳಿದ ಉದಾಹರಣೆಗಳು ಇಲ್ಲ’ ಎಂದು ಇಲ್ಲಿನ ಕಮ್ಮಾರರು ಆತ್ಮವಿಶ್ವಾಸದಿಂದ ಹೇಳುತ್ತಾರೆ. ಮಾನ್ವಿ, ಬಳ್ಳಾರಿ, ಗಂಗಾವತಿ, ಹೊಸಪೇಟೆ, ಕೊಪ್ಪಳ, ರಾಯಚೂರ, ವಿಜಯಪುರ, ಬಾಗಲಕೋಟೆ ಮತ್ತು ದೂರದ ಬೆಂಗಳೂರಿ–ನಲ್ಲೂ ಮುಂಡರಗಿ ಈಳಿಗೆಗಳಿಗೆ ಬೇಡಿಕೆಯಿದೆ. ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದಲ್ಲಿಯೂ ಇಲ್ಲಿನ ಈಳಿಗೆಗಳು ಪರಿಚಿತವಾಗಿವೆ.

ಇವರು ತಯಾರಿಸಿದ ಈಳಿಗೆಗೆ 80ರಿಂದ 130 ರೂಪಾಯಿವರೆಗೆ ಬೆಲೆ ಕಟ್ಟಿ ಅಂಗಡಿಗಳಿಗೆ, ಗುತ್ತಿಗೆದಾರರಿಗೆ ಮಾರಾಟ ಮಾಡುತ್ತಾರೆ. ಅಂಗಡಿಯಲ್ಲಿ ಬೆಲೆ 300 ರಿಂದ 500 ರೂಪಾಯಿವರೆಗೂ ಇರುತ್ತದೆ.

ಆದರೆ ಈ ಈಳಿಗೆಗಳನ್ನು ತಯಾರಿಸುವವರ ಬದುಕು ಅಷ್ಟೇನೂ ಹಸನಾಗಿಲ್ಲ ಎನ್ನುವುದೂ ನಿಜ. ದ್ಯಾಮಣ್ಣ ಕಮ್ಮಾರ, ಮೌನೇಶ ಕಮ್ಮಾರ, ಮಾನಪ್ಪ ಕಮ್ಮಾರ, ದೇವಣ್ಣ ಪತ್ತಾರ, ಮಂಜುನಾಥ ಕಮ್ಮಾರ ಎಂಬ ಐದು ಕುಟುಂಬದವರು ಮುಂಡರಗಿಯಲ್ಲಿ ವಂಶ ಪಾರಂಪರ್ಯವಾಗಿ ತಮ್ಮ ಕುಲ ಕಸುಬನ್ನೇ ಮುಂದುವರಿಸಿದ್ದಾರೆ.

‘ನಾವು ಕಷ್ಟ ಪಟ್ಟು ಈಳಿಗೆ ತಯಾರಿಸುತ್ತೇವೆ. ಹೊಟ್ಟೆ ಬಟ್ಟೆಗೆ ಕೊರತೆಯಿಲ್ಲ. ಆದರೆ ಇದಕ್ಕೆ ಬೇಕಾಗುವ ಕಚ್ಚಾ ವಸ್ತುಗಳ ದರವೂ ಹೆಚ್ಚಿದೆ. ಇದೇ ವೃತ್ತಿಯಲ್ಲಿ ನಮ್ಮ ತಂದೆ ದೇವೆಂದ್ರಪ್ಪ ಕಷ್ಟದಿಂದ ಜೀವನ ಸವೆಸಿದರು. ಶ್ರಮಪಟ್ಟರೆ ಈಳಿಗೆ ತಯಾರಿಕೆಯಲ್ಲಿ ನಷ್ಟವಿಲ್ಲ. ಆದರೆ ಅತ್ಯಾಧುನಿಕ ಯಂತ್ರೋಪಕರಣಗಳ ಮೂಲಕ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆ ಮಾಡಬೇಕೆಂದರೆ ಯಾವ ಬ್ಯಾಂಕ್‌ಗಳೂ ನಮಗೆ ಸಾಲ ನೀಡಲು ಮುಂದೆ ಬರುತ್ತಿಲ್ಲ. ಅನೇಕ ವರ್ಷಗಳಿಂದ ಸರಕಾರಿ ಇಲಾಖೆಗಳಿಗೆ, ಬ್ಯಾಂಕುಗಳಿಗೆ ಅರ್ಜಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ’ ಎನ್ನುತ್ತಾರೆ ಮೌನೇಶ ದೇವೇಂದ್ರಪ್ಪ ಕಮ್ಮಾರ.

ಕಬ್ಬಿಣದ ಬೆಲೆ ಏರಿದೆ. ಪಡುವ ಶ್ರಮಕ್ಕೂ, ಸಿಗುವ ಲಾಭಕ್ಕೂ ತಾಳಮೇಳ ಇಲ್ಲದೆ ಇರುವುದರಿಂದ ಹಲವು ಕಮ್ಮಾರ ಕುಟುಂಬಗಳು ಈ ಉದ್ಯೋಗದಿಂದ ಈಗಾಗಲೆ ದೂರ ಸರಿದಿವೆ. ಆದರೆ ಮುಂಡರಗಿ ಈಳಿಗೆಗಳ ವಿನ್ಯಾಸ ಮತ್ತು ಕಮ್ಮಾರರ ಕರಕೌಶಲ್ಯದಿಂದಾಗಿ ಇನ್ನೂ ಬೇಡಿಕೆ ಉಳಿದುಕೊಂಡಿದೆ. ಮುಂಡರಗಿ ಈಳಿಗೆಗೆ ಭಾರೀ ಬೇಡಿಕೆ ಇರುವ ಹಿನ್ನೆಲೆಯಲ್ಲಿ ಬ್ಯಾಂಕುಗಳು ಮುಂದೆ ಬಂದು ಸಾಲ ನೀಡಿದರೆ ಇದನ್ನೊಂದು ವ್ಯವಸ್ಥಿತ ಗುಡಿ ಕೈಗಾರಿಕೆ–ಯಾಗಿ ಬೆಳೆಸಬಹುದು. ಹೊಸ ಮಾರುಕಟ್ಟೆಯನ್ನೂ ಸೃಷ್ಟಿಸಬಹುದು. ಸರ್ಕಾರ ಇಂತಹ ಶ್ರಮಜೀವಿಗಳ ಬದುಕು ಕಟ್ಟಿಕೊಳ್ಳಲು ಹೊಸ ಯೋಜನೆ–ಗಳನ್ನು ಕಾರ್ಯರೂಪಕ್ಕೆ ತರಬೇಕಿದೆ.